# ವರ್ತಮಾನದಲ್ಲಿ ಸ್ವಪ್ನಮಂಟಪ



ಸಾಹಿತಿ, ನಿರ್ದೇಶಕ ಬರಗೂರು ರಾಮಚಂದ್ರಪ್ಪ ಅವರ 'ಸ್ವಪ್ನಮಂಟಪ' ಸಿನಿಮಾ ಬಿಡುಗಡೆಗೆ ಸಿದ್ಧಗೊಂಡಿದ್ದು, ಒಂದು ವಿಶೇಷ ಕಥಾವಸ್ತುವಿನೊಂದಿಗೆ ಪ್ರೇಕ್ಷಕರ ಮುಂದೆ ಬರಲು ಸಜ್ಜಾಗಿದೆ.

ಚಿತ್ರಕ್ಕೆ ಬರಗೂರು ರಾಮಚಂದ್ರಪ್ಪ ಅವರೇ ಚಿತ್ರಕಥೆ, ಸಂಭಾಷಣೆ, ಗೀತರಚನೆ ಮಾಡಿ ನಿರ್ದೇಶನ ಮಾಡಿದ್ದಾರೆ. ಸಿನಿಮಾ ಚಿತ್ರೀಕರಣ ಪೂರ್ಣಗೊಂಡಿದೆ.



'ಚಿತ್ರವು ಪಾರಂಪರಿಕ ಸ್ಥಳಗಳ ರಕ್ಷಣೆಯನ್ನು ಪ್ರತಿಪಾದಿಸುವ ಕಥಾವಸ್ತುವನ್ನು ಒಳಗೊಂಡಿದೆ. ಒಂದು ಹಳ್ಳಿಯಲ್ಲಿ ರಾಜನೊಬ್ಬ ನಿರ್ಮಿಸಿದ ಸ್ವಪ್ನಮಂಟಪವನ್ನು ಕೆಡವಿ ಹಾಕುವ ಪ್ರಯತ್ನವನ್ನು ಕೆಲವರು ಮಾಡಿದಾಗ, ಕಥಾನಾಯಕ ಮತ್ತು ನಾಯಕಿ ಜನರನ್ನು ಸಂಘಟಿಸಿ ಸ್ವಪ್ನಮಂಟಪವನ್ನು ಉಳಿಸಿ ಸರ್ಕಾರದ ಅಧಿಕೃತ ಸ್ಮಾರಕದ ಪಟ್ಟಿಗೆ ಸೇರಿಸುವ ಮೂಲಕ ಚಾರಿತ್ರಿಕ ಸ್ಮಾರಕಗಳ ಪರಂಪರೆಯನ್ನು ಎತ್ತಿ ಹಿಡಿಯುತ್ತಾರೆ. ಈ ಸಾಮಾಜಿಕ ಚಿತ್ರದಲ್ಲಿ ಸ್ವಪ್ನಮಂಟಪವನ್ನು ನಿರ್ಮಾಣ ಮಾಡಿದ್ದ ರಾಜ–ರಾಣಿಯರ ಕಥನವೂ ಹಿನ್ನೋಟದಲ್ಲಿ ಸೇರಿಸಿರುವುದು ಒಂದು ವಿಶೇಷ' ಎಂದು ಸಿನಿಮಾ ಕುರಿತು ಮಾಹಿತಿ ನೀಡಿದ್ದಾರೆ ಬರಗೂರು ರಾಮಚಂದ್ರಪ್ಪ.

ವಿಜಯ ರಾಘವೇಂದ್ರ ಮತ್ತು ರಂಜನಿ ರಾಘವನ್ ದ್ವಿಪಾತ್ರಗಳಲ್ಲಿ ಅಭಿನಯಿಸಿರುವುದು ಈ ಸಿನಿಮಾದ ಮತ್ತೊಂದು ವಿಶೇಷ. ಸುಂದರ್ ರಾಜ್, ಶೋಭಾ ರಾಘವೇಂದ್ರ, ರಜನಿ, ಮಹಾಲಕ್ಷ್ಮಿ, ಸುಂದರರಾಜ ಅರಸು, ರಾಜಪ್ಪ ದಳವಾಯಿ, ಅಂಬರೀಶ ಸಾರಂಗಿ, ಮೈಸೂರು ಮಂಜುಳ, ಉಮ್ಮತ್ತೂರು ಬಸವರಾಜು, ವೆಂಕಟರಾಜು, ಶಿವಲಿಂಗಪ್ರಸಾದ್, ಭಾರತಿ ರಮೇಶ್, ಗುಂಡಿ ರಮೇಶ್ ತಾರಾಗಣದಲ್ಲಿ ಇದ್ದಾರೆ. ■

# ರಂಗಾಯಣ ರಘು
## ಸಿನಿಮಾ ಅವಲೋಕನ

**400ಕ್ಕೂ** ಅಧಿಕ ಕನ್ನಡ ಸಿನಿಮಾಗಳಲ್ಲಿ ನಟಿಸಿರುವ ನಟ ರಂಗಾಯಣ ರಘು, ಎಂಥ ಪಾತ್ರಕ್ಕೂ ಜೀವ ತುಂಬಬಲ್ಲವರು. ವಿಲನ್ ಪಾತ್ರಕ್ಕೂ ಹಾಸ್ಯದ ಶೇಡ್ ಕೊಟ್ಟು ರಂಜಿಸಿದವರು. ಈಚೆಗೆ ಸಂದರ್ಶನವೊಂದರಲ್ಲಿ ಮಾತನಾಡಿರುವ ಅವರು, ಕನ್ನಡ ಸಿನಿಮಾರಂಗದ ಬಗ್ಗೆ, ಹಾಗೇ ತಮ್ಮ ಸಿನಿಮಾಜೀವನದ ಬಗ್ಗೆ ಮೆಲುಕು ಹಾಕಿದ್ದಾರೆ.

'2000ನೇ ಇಸವಿಯ ಆಸುಪಾಸು ಕನ್ನಡ ಸಿನಿಮಾಗೆ ಅತಿ ಕೆಟ್ಟ ಹಂತವಾಗಿತ್ತು. ರೀಮೇಕ್‌ಗಳಲ್ಲೇ ಕಳೆದುಹೋಗಿದ್ದೆವು. ಕಂಟೆಂಟ್ ವಿಚಾರವಾಗಿ ದಿವಾಳಿಯಾಗಿದ್ದೆವು. ಸ್ಕ್ರಿಪ್ಟ್‌ಗಳ ಬದಲು ಒರಿಜಿನಲ್ ಸೀಡಿಗಳನ್ನು ನಿರ್ದೇಶಕರು ನೀಡುತ್ತಿದ್ದರು. ರೀಮೇಕ್ ಸಿನಿಮಾದಲ್ಲಿ ಮೂಲ ಸಿನಿಮಾದ ಪ್ರತಿ ಚಲನೆಯನ್ನು ನಾವು ಅನುಕರಿಸಬೇಕಿತ್ತು. ಹಾಲಿವುಡ್ ನಟರು ಮಂಡಿವರೆಗಿನ ಬ್ಲಾಕ್ ಕೋಟ್ ಧರಿಸಿದರೆ, ಇಲ್ಲೂ ಅದನ್ನೇ ಮಾಡಬೇಕೆಂದು ಬಯಸುತ್ತಿದ್ದರು' ಎಂದು ಆಗಿನ ಸಿನಿಮಾ ಸ್ಥಿತಿಯನ್ನು ತೆರೆದಿಟ್ಟಿದ್ದಾರೆ.

'ಹೀರೊಗಳಲ್ಲದೆ, ಕ್ಯಾರೆಕ್ಟರ್ ಆರ್ಟಿಸ್ಟ್‌ಗಳು, ತಮ್ಮ ಪಾತ್ರ ಜನರ ಮನದಲ್ಲುಳಿಯುವಂತೆ ಮಾಡಲು ಒಂದು ವಿಭಿನ್ನತೆಯ ಸ್ಪರ್ಶ ನೀಡಬೇಕಾಗುತ್ತದೆ. ಇದಕ್ಕಾಗಿಯೇ ನಾನು ವಿಲನ್ ಪಾತ್ರವನ್ನು ಗಂಭೀರವಾಗಿ ಮಾಡುವ ಬದಲು ಅದಕ್ಕೆ ಒಂದು ಕಾಮಿಕ್ ಟ್ವಿಸ್ಟ್ ನೀಡುತ್ತಿದ್ದೆ. ರಂಗ SSLC, ಸುಂಟರಗಾಳಿ ಇಂಥ ಸಿನಿಮಾಗಳಲ್ಲಿ ವಿಲನ್ ಪಾತ್ರವನ್ನೂ ಜನ ಮೆಚ್ಚುವಂತೆ ಮಾಡಬೇಕೆಂದುಕೊಂಡೆ. 'ಗ್ರೇ ಕ್ಯಾರೆಕ್ಟರ್'ಗಳಿಗೆ ಹಾಸ್ಯದ ಸ್ಪರ್ಶ ನೀಡುವ ಪಾತ್ರಗಳನ್ನು ಮಾಡಲು ಬಾಲಕೃಷ್ಣ, ಮುಸುರಿ ಕೃಷ್ಣಮೂರ್ತಿಯಂಥವರು ನನಗೆ ಸ್ಫೂರ್ತಿ' ಎಂದು ಮಾತು ಹಂಚಿಕೊಂಡಿದ್ದಾರೆ.

ಪ್ರಸ್ತುತ ಸಿನಿಮಾರಂಗದಲ್ಲಿನ ಬದಲಾವಣೆ ಕುರಿತು ಮಾತನಾಡುತ್ತಾ, 'ಈಗ ರಿಯಲಿಸ್ಟಿಕ್ ಸಿನಿಮಾಗಳ ಕಡೆಗೆ ಚಲಿಸುತ್ತಿದ್ದೇವೆ. ವಾಸ್ತವಿಕ ನೆಲೆಗಟ್ಟಿನ ಹಲವು ಸಿನಿಮಾಗಳು ಮೂಡಿಬರುತ್ತಿವೆ' ಎಂದಿದ್ದಾರೆ. ■





# 'ವೆಟ್ರಿವೇಲ್...' ರಾಜ್!

**ಕನ್ನಡದ** ನಿರ್ದೇಶಕ, ನಟ ರಾಜ್ ಬಿ. ಶೆಟ್ಟಿ ಮಲೆಯಾಳಂನ 'ಟರ್ಬೊ' ಚಿತ್ರದಲ್ಲಿ ಅಭಿನಯಿಸುತ್ತಿದ್ದು, ವಿಲನ್ ಪಾತ್ರದಲ್ಲಿ ಖಡಕ್ ಆಗಿ ಮಿಂಚಲಿದ್ದಾರೆ. ಮಲೆಯಾಳಂನ ಖ್ಯಾತ ನಟ ಮಮ್ಮುಟ್ಟಿ ಜೊತೆ ತೆರೆಹಂಚಿಕೊಳ್ಳುತ್ತಿದ್ದು, ಈ ಪಾತ್ರದಲ್ಲಿನ ಭಿನ್ನತೆಯನ್ನು ನೋಡಿಯೇ ಸಿನಿಮಾ ಮಾಡಲು ಮುಂದಡಿ ಇಟ್ಟಿದ್ದಾರಂತೆ. 'ವೆಟ್ರಿವೇಲ್ ಷಣ್ಮುಗಸುಂದರಂ' ಎಂಬ ಪಾತ್ರಕ್ಕೆ ರಾಜ್ ಬಣ್ಣ ಹಚ್ಚಿದ್ದಾರೆ.

ಈ ಪಾತ್ರದ ಬಗ್ಗೆ ಹಲವು ವಿಚಾರಗಳನ್ನು ಹಂಚಿಕೊಂಡಿದ್ದಾರೆ ಅವರು. ''ನನ್ನನ್ನು 'ಟರ್ಬೊ' ಚಿತ್ರತಂಡ ಸಂಪರ್ಕಿಸಿತ್ತು. ನಾನು ಮೊದಲು ಕಥೆ ಕೇಳಿದೆ. ಆ ಪಾತ್ರ ಬಹಳ ಪರಿಣಾಮ ಬೀರುವ ಪಾತ್ರ ಎಂದೆನಿಸಿತು, ಮಮ್ಮುಟ್ಟಿ ಅವರ ಜೊತೆ ತೆರೆಹಂಚಿಕೊಳ್ಳುತ್ತಿರುವ ಪಾತ್ರ ಎಂದಾಕ್ಷಣ ಖುಷಿ, ಆಶ್ಚರ್ಯ ಎರಡೂ ಆಯಿತು. ಮಲೆಯಾಳಂನಲ್ಲಿ ಇದು ನನ್ನ ಮೊದಲ ಸಿನಿಮಾ. ನನ್ನದೇ ಪಾತ್ರ ಪ್ರಮುಖವಾದದ್ದು ಎಂದು ಚಿತ್ರತಂಡ ಹೇಳಿದಾಗ ಮತ್ತಷ್ಟು ಹುರುಪು ಬಂತು'' ಎಂದಿದ್ದಾರೆ.

ಈ ಸಿನಿಮಾಗಾಗಿ ಮಲೆಯಾಳಂ ಭಾಷೆಯನ್ನೂ ಕಲಿತಿದ್ದಾರಂತೆ ರಾಜ್. ಸಿನಿಮಾಗಾಗಿ ಸ್ಥಳೀಯ ಮಲೆಯಾಳಿ ವ್ಯಕ್ತಿಯೊಂದಿಗೆ ಒಡನಾಡಿ ಭಾಷೆ ಕಲಿತಿದ್ದಾರೆ. ಸಿನಿಮಾ ಮೇ 23ರಂದು ಬಿಡುಗಡೆಯಾಗುತ್ತಿದ್ದು, '45' ಸಿನಿಮಾ ಚಿತ್ರೀಕರಣದಲ್ಲೂ ಬ್ಯುಸಿಯಾಗಿದ್ದಾರೆ. ಈ ನಡುವೆ ಮತ್ತೊಂದು ಹೊಸ ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದಾರೆ. ■